ಶ್ರೀ ಶಾಂತಾ ಸಮೇತ ಋಷ್ಯಶೃಂಗೇಶ್ವರ ಸ್ವಾಮಿನೇ ನಮಃ







# ಶ್ರೀ ಶಾಂತಾಂಬಿಕಾ ಪ್ರತಿಷ್ಠಾ ಶತಮಾನೋತ್ಸವ

# ಆಹ್ವಾನ ಪತ್ರಿಕೆ

## ಶ್ರೀ ಶಾಂತಾಂಬಿಕಾ ಪ್ರತಿಷ್ಠಾ ಶತಮಾನೋತ್ಸವ ಆಹ್ವಾನ ಪತ್ರಿಕೆ

ತ್ರೇತಾಯುಗದಲ್ಲಿ ದಶರಥಮಹಾರಾಜನಿಂದ ಪುತ್ರಕಾಮೇಷ್ಟಿಯಾಗವನ್ನು ಮಾಡಿಸಿದವರೂ ತಮ್ಮ ಕ್ಷಣಮಾತ್ರಸಾನ್ನಿಧ್ಯದಿಂದಲೇ ಸುವೃಷ್ಟಿಯನ್ನು ಅನುಗ್ರಹಿಸಿ ಭಕ್ತರ ಈತಿಬಾಧೆಗಳನ್ನು ಹೋಗಲಾಡಿಸುವವರೂ ಮಹಾಮಹಿಮಸಂಪನ್ನರೂ ಆದ ಶ್ರೀಋಷ್ಯಶೃಂಗಮಹರ್ಷಿಗಳು ಲೋಕಕಲ್ಯಾಣಾರ್ಥವಾಗಿ ಪರಮೇಶ್ವರನನ್ನು ಕುರಿತು ಆಚರಿಸಿದ ಸುದೀರ್ಘ ತಪಸ್ಸಿನ ಫಲವಾಗಿ ಪರಮೇಶ್ವರನು ಪ್ರತ್ಯಕ್ಷನಾದಾಗ "ನೀನು ನನ್ನಲ್ಲೇ ಐಕ್ಯನಾಗು" ಎಂಬ ವರವನ್ನು ಪ್ರಾರ್ಥಿಸಿ ಪರಮೇಶ್ವರನನ್ನೇ ತಮ್ಮಲ್ಲಿ ಐಕ್ಯ ಮಾಡಿಕೊಂಡಿರುವ ಐತಿಹಾಸಿಕ ಸ್ಥಳವೇ ಋಷ್ಯಶೃಂಗಪುರ. ಅದೇ ಇಂದಿನ ಜಗತ್ಪ್ರಸಿದ್ಧವಾದ ಶೃಂಗೇರೀಕ್ಷೇತ್ರ. ಇಲ್ಲಿ ಇಂದಿಗೂ ನಾವು ಶ್ರೀಋಷ್ಯಶೃಂಗೇಶ್ವರರನ್ನು ಲಿಂಗರೂಪದಲ್ಲಿ ದರ್ಶನ ಮಾಡಬಹುದಾಗಿದೆ. ಆದ್ದರಿಂದಲೇ ಇಂತಹ ಐತಿಹಾಸಿಕ ಮಹಿಮೆಯುಳ್ಳ ಪರಮಪವಿತ್ರವಾದ ಶೃಂಗೇರೀಕ್ಷೇತ್ರದಲ್ಲಿ ಸನಾತನಹಿಂದೂಧರ್ಮೋದ್ಧಾರಕರಾದ ಜಗದ್ಗುರುಶ್ರೀಆದಿಶಂಕರಾಚಾರ್ಯರು ದಕ್ಷಿಣಾಮ್ನಾಯಶೃಂಗೇರೀಶಾರದಾಪೀಠವನ್ನು ಸ್ಥಾಪಿಸಿದ್ದಾರೆ.

ಶ್ರೀಋಷ್ಯಶೃಂಗೇಶ್ವರದೇವಾಲಯಕ್ಕೂ ಶೃಂಗೇರಿಶ್ರೀಶಾರದಾಪೀಠಕ್ಕೂ ಅವಿನಾಭಾವಸಂಬಂಧವಿದೆ ಹಾಗೂ ಶೃಂಗೇರೀ ಶಾರದಾ ಪೀಠದ ಜಗದ್ಗುರುಗಳು ಮಾತ್ರವೇ ತಮ್ಮ ಅಮೃತಹಸ್ತಗಳಿಂದ ಶ್ರೀಋಷ್ಯಶೃಂಗೇಶ್ವರಸ್ವಾಮಿಗೆ ಮಹಾಪೂಜೆಯನ್ನು ನೆರವೇರಿಸುವ ಸಂಪ್ರದಾಯವು ಇಂದಿಗೂ ಪ್ರಚಲಿತವಾಗಿದೆ. ಮಳೆಯ ದೇವರೆಂದೇ ಪ್ರಖ್ಯಾತವಾದ ಋಷ್ಯಶೃಂಗೇಶ್ವರರನ್ನು ಹಲವುಬಾರಿ ಅನಾವೃಷ್ಟಿ ಮೊದಲಾದ ಸಂಕಷ್ಟಗಳು ಉಂಟಾದ ಸಂದರ್ಭಗಳಲ್ಲಿ ಈ ಪ್ರಾಂತ್ಯದಲ್ಲಿರುವ ಜನರೆಲ್ಲರೂ ಪ್ರಾರ್ಥಿಸಿ ದೇವರ ಅನುಗ್ರಹದಿಂದ ಸುವೃಷ್ಟಿ–ಸಸ್ಯಾದಿ–ಸಮೃದ್ಧಿಗಳನ್ನು ಪಡೆದುಕೊಳ್ಳುತ್ತಾರೆ. ಸುಮಾರು ನೂರು ವರ್ಷಗಳ ಹಿಂದೆ ಕಿಗ್ಗಾ ಸೀಮೆಯ ಪ್ರಾಂತ್ಯದಲ್ಲಿ ಹಲವಾರು ತಾಪತ್ರಯಗಳು ಉಂಟಾಗಿ ತತ್ಪರಿಹಾರಕ್ಕಾಗಿ ಇಲ್ಲಿಯ ಮಹಾಜನರು ಅಂದಿನ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ 34ನೇ ಅಧಿಪತಿಗಳು ಜೀವನ್ಮುಕ್ತರೂ ತಪಶ್ಚಕ್ರವರ್ತಿಗಳೂ ಆದ **ಜಗದ್ಗುರು ಶ್ರೀಚಂದ್ರಶೇಖರ ಭಾರತೀ ಮಹಾಸ್ವಾಮಿ**ಗಳವರಲ್ಲಿ ಪ್ರಾರ್ಥಿಸಿಕೊಂಡಾಗ ಋಷ್ಯಶೃಂಗೇಶ್ವರ ಸ್ವಾಮಿಯ ಎಡಭಾಗದಲ್ಲಿ ಶ್ರೀಶಾಂತಾಮ್ಮನವರ ಪ್ರತಿಷ್ಠೆಯನ್ನು ಮಾಡಿ ಆರಾಧಿಸಿ ಎಂಬುದಾಗಿ ಅಪ್ಪಣೆಯನ್ನು ಮಾಡಿದರು. ಜಗದ್ಗುರುಗಳ ಅಪ್ಪಣೆಯನ್ನು ಶಿರಸಾವಹಿಸಿ ಋಷ್ಯಶೃಂಗೇಶ್ವರ ಸ್ವಾಮಿಯ ಪಕ್ಕದಲ್ಲಿ ಶ್ರೀಶಾಂತಾಮ್ಮನವರನ್ನು ಪ್ರತಿಷ್ಠಾಪಿಸಲಾಯಿತು.

ಜಗದ್ಗುರು ಶ್ರೀಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ಶ್ರೀಶಾಂತಾಮ್ಮನವರ ದಿವ್ಯಸಾನ್ನಿಧ್ಯದ ಅಭಿವೃದ್ಧಿಗಾಗಿ ತಮ್ಮ ಅಮೃತಹಸ್ತಗಳಿಂದ ಮಹಾಕುಂಭಾಭಿಷೇಕವನ್ನು ನೆರವೇರಿಸಿ ಆ ಜಗನ್ಮಾತೆಯನ್ನು ಪ್ರಾರ್ಥನೆ ಮಾಡಿ ಎಲ್ಲ ಭಕ್ತಜನರನ್ನು ಅನುಗ್ರಹಿಸಿರುತ್ತಾರೆ. ಇದರಿಂದ ಎಲ್ಲ ತಾಪತ್ರಯಗಳು ಪರಿಹಾರವಾದವು.ಅಂದಿನಿಂದಲೂ ಶೃಂಗೇರೀಜಗದ್ಗುರುಮಹಾಸ್ವಾಮಿಗಳವರು ಶ್ರೀಋಷ್ಯಶೃಂಗೇಶ್ವರರಿಗೆ ಮಹಾಪೂಜೆಯನ್ನು ನೆರವೇರಿಸುವ ಸಂದರ್ಭಗಲ್ಲಿ ಶ್ರೀಶಾಂತಾಮ್ಮನವರಿಗೂ ವಿಶೇಷಪೂಜೆಯನ್ನು ನೆರವೇರಿಸುವುದು ಸಂಪ್ರದಾಯವಾಗಿ ಬಂದಿದೆ. ಅದರಂತೆ ಪೀಠದ 35ನೇ ಅಧಿಪತಿಗಳಾದ ಜಗದ್ಗುರು ಶ್ರೀಶ್ರೀಅಭಿನವ ವಿದ್ಯಾತೀರ್ಥಮಹಾಸ್ವಾಮಿಗಳು ಶ್ರೀಶಾಂತಾಂಬಿಕಾಸಮೇತಋಷ್ಯಶೃಂಗೇಶ್ವರ ಸ್ವಾಮಿಗೆ ಹಲವಾರು ಬಾರಿ ವಿಶೇಷಪೂಜೆಯನ್ನು ನೆರವೇರಿಸಿರುತ್ತಾರೆ. ಪ್ರಸ್ತುತ ಪೀಠಾಧಿಪತಿಗಳಾದ **ಜಗದ್ಗುರು ಶ್ರೀಭಾರತೀತೀರ್ಥ ಮಹಾಸ್ವಾಮಿ**ಗಳೂ ಹಲವು ಬಾರಿ ವಿಶೇಷಪೂಜೆಯನ್ನು ನೆರವೇರಿಸಿದ್ದಲ್ಲದೇ 1993ನೇ ಇಸವಿಯಲ್ಲಿ ಶ್ರೀಋಷ್ಯಶೃಂಗೇಶ್ವರ ಸ್ವಾಮಿಗೆ ಅಷ್ಟಬಂಧ ಹಾಗೂ ಮಹಾಕುಂಭಾಭಿಷೇಕವನ್ನು ಸಂಪನ್ನಗೊಳಿಸಿರುತ್ತಾರೆ. ತದನಂತರ ಜಗದ್ಗುರು ಶ್ರೀಭಾರತೀತೀರ್ಥ ಮಹಾಸ್ವಾಮಿಗಳವರ ಅಪ್ಪಣೆಯನ್ನು ಪಡೆದು ತತ್ಕರಕಮಲಸಂಜಾತರಾದ **ಜಗದ್ಗುರು ಶ್ರೀಶ್ರೀವಿಧುಶೇಖರ ಭಾರತೀ ಮಹಾಸ್ವಾಮಿ**ಗಳವರು 2020ರಲ್ಲಿ ವಿಕಾರಿ ನಾಮ ಸಂವತ್ಸರದ ಫಾಲ್ಗುಣ ಮಾಸ ಶುಕ್ಲ ಪಕ್ಷ ತದಿಗೆಯಂದು ಶ್ರೀಶಾಂತಾಸಮೇತಋಷ್ಯಶೃಂಗೇಶ್ವರ ಸ್ವಾಮಿಗೆ ಅಷ್ಟಬಂಧ ಮಹಾಕುಂಭಾಭಿಷೇಕವನ್ನು ನೆರವೇರಿಸಿರುತ್ತಾರೆ. ಅದೇರೀತಿ ಜಗದ್ಗುರು ಶ್ರೀಭಾರತೀತೀರ್ಥಮಹಾಸ್ವಾಮಿಗಳವರ ಸಪ್ತತಿಪೂರ್ತಿಮಹೋತ್ಸವ

ಸನ್ಯಾಸಸ್ವೀಕಾರಸುವರ್ಣಮಹೋತ್ಸವ ಮುಂತಾದ ಸಂದರ್ಭಗಳಲ್ಲೂ ಪೀಠದ ವತಿಯಿಂದ ಲೋಕಕಲ್ಯಾಣಾರ್ಥವಾಗಿ ಮಹಾರುದ್ರಾದಿ ಅನುಷ್ಠಾನಗಳನ್ನು ಮಾಡಿಸಿ ದೇವರಿಗೆ ವಿಶೇಷ ಪೂಜೆಯನ್ನು ನೆರವೇರಿಸಿರುತ್ತಾರೆ.

ಇದೀಗ ಶ್ರೀಶಾಂತಾಮ್ಮನವರ ಪ್ರತಿಷ್ಠೆಯಾಗಿ ನೂರು ವರ್ಷಗಳು ತುಂಬಿರುವ ಈ ಸಂದರ್ಭವನ್ನು ವೈಭವೋಪೇತವಾಗಿ ಆಚರಿಸಬೇಕೆಂದು ಸಂಕಲ್ಪಿಸಿ ಶ್ರೀಶಾಂತಾಮ್ಮನವರ ದಿವ್ಯಸಾನ್ನಿಧ್ಯವೃದ್ಧಿಗೆ ಹಾಗೂ ಲೋಕಕಲ್ಯಾಣಾರ್ಥವಾಗಿ ಜಗದ್ಗುರು ಶ್ರೀವಿಧುಶೇಖರ ಭಾರತೀ ಸನ್ನಿಧಾನಂಗಳವರು ತಮ್ಮ ಗುರುಗಳ ಅಪ್ಪಣೆಯನ್ನು ಪಡೆದು **ವಿಶ್ವಾವಸುವೈಶಾಖ ಶುಕ್ಲ ಏಕಾದಶಿಯಿಂದ ಹುಣ್ಣಿಮೆವರೆಗೆ ಶ್ರೀಶಾಂತಾಸಮೇತ ಋಷ್ಯಶೃಂಗೇಶ್ವರ ಸ್ವಾಮಿಯ ದೇವಾಲಯದಲ್ಲಿ ಮಹಾರುದ್ರಯಾಗ ಮತ್ತು ಸಹಸ್ರಚಂಡಿಕಾ ಯಾಗವನ್ನು ಅನುಷ್ಠಾನಗೊಳಿಸಲು ಸಂಕಲ್ಪಿಸಿರುತ್ತಾರೆ. ಹಾಗೆಯೇ ಶ್ರೀಶಾಂತಾಮ್ಮನವರ ಪ್ರತಿಷ್ಠಾ ಶುಭದಿನವಾದ ವೈಶಾಖ ಶುಕ್ಲ ಚತುರ್ದಶಿಯಂದು ಶ್ರೀಋಷ್ಯಶೃಂಗೇಶ್ವರ ಸ್ವಾಮಿಗೆ ಹಾಗೂ ಶಾಂತಾಮ್ಮನವರಿಗೆ ಬ್ರಹ್ಮಕಲಶಾಭಿಷೇಕವನ್ನು ನೆರವೇರಿಸಲಿದ್ದಾರೆ.**

ಶ್ರೀಶಾಂತಾಸಮೇತಋಷ್ಯಶೃಂಗೇಶ್ವರದೇವರ ಹಾಗು ಜಗದ್ಗುರುಮಹಾಸ್ವಾಮಿಗಳವರ ಪರಮಾನುಗ್ರಹದಿಂದ ನಡೆಸಲ್ಪಡುತ್ತಿರುವ ಈ ಶತಮಾನೋತ್ಸವಕಾರ್ಯಕ್ರಮದಲ್ಲಿ ಭಗವದ್ಭಕ್ತರೆಲ್ಲರೂ ಶ್ರದ್ಧಾಭಕ್ತಿಗಳಿಂದ ಭಾಗವಹಿಸಿ ಗುರುದೇವತಾನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸುತ್ತಿದ್ದೇವೆ.

ಸ್ಥಳ – ಶೃಂಗೇರಿ
ದಿನಾಂಕ – 30.4.2025

ಗುರುಸೇವಾ ನಿರತ
ಪಿ. ಎ. ಮುರಳಿ
ಆಡಳಿತಾಧಿಕಾರಿಗಳು, ಶ್ರೀಮಠ ಶೃಂಗೇರಿ

## ಕಾರ್ಯಕ್ರಮಗಳು

### ವೈಶಾಖ ಶುಕ್ಲ ದಶಮಿ ಬುಧವಾರ 07-05-2025

ಸಹಸ್ರಮೋದಕ ಗಣಪತಿ ಹೋಮ

### ವೈಶಾಖ ಶುಕ್ಲ ಏಕಾದಶಿ ಗುರುವಾರ 08-05-2025

**ಬೆಳಗ್ಗೆ –** **8.00ಗೆ ಶ್ರೀಜಗದ್ಗುರುಸನ್ನಿಧಾನಂಗಳವರ ಆಗಮನ,** ದೇವರ ದರ್ಶನ
ಮಹಾರುದ್ರಯಾಗದ ಸಂಕಲ್ಪ, ಋತ್ವಿಗ್ವರಣೆ, ರುದ್ರಪುರಶ್ಚರಣೆ ಪ್ರಾರಂಭ
ಸಹಸ್ರಚಂಡೀ ಯಾಗದ ಸಂಕಲ್ಪ, ಋತ್ವಿಗ್ವರಣೆ, ಸಹಸ್ರಚಂಡೀ ಪ್ರಯುಕ್ತ ಸಪ್ತಶತೀಪಾರಾಯಣ

**ಸಂಜೆ –** ಶಿವಸಹಸ್ರನಾಮಾರ್ಚನೆ, ಶಿವಪಂಚಾಕ್ಷರೀಮಂತ್ರಜಪ, ಚಂಡೀ ನವಾಕ್ಷರೀ ಮಂತ್ರಜಪ, ಅಷ್ಟಾವಧಾನಸೇವೆ, ಪ್ರಸಾದವಿನಿಯೋಗ

**ವೈಶಾಖ ಶುಕ್ಲ ದ್ವಾದಶಿ ಶುಕ್ರವಾರ 09-05-2025**

**ಬೆಳಗ್ಗೆ** – ಮಹಾರುದ್ರ ಪುರಶ್ಚರಣೆ , ಸಹಸ್ರಚಂಡೀ ಪ್ರಯುಕ್ತ ಸಪ್ತಶತೀಪಾರಾಯಣ

**ಸಂಜೆ** – ಶಿವಸಹಸ್ರನಾಮಾರ್ಚನೆ, ಶಿವಪಂಚಾಕ್ಷರೀಮಂತ್ರಜಪ, ಅಷ್ಟಾವಧಾನಸೇವೆ,
ಪ್ರಸಾದವಿನಿಯೋಗ

**ವೈಶಾಖ ಶುಕ್ಲ ತ್ರಯೋದಶಿ ಶನಿವಾರ 10-05-2025**

**ಬೆಳಗ್ಗೆ** – ಮಹಾರುದ್ರ ಪುರಶ್ಚರಣೆ , ಸಹಸ್ರಚಂಡೀ ಪ್ರಯುಕ್ತ ಸಪ್ತಶತೀಪಾರಾಯಣ

**ಸಂಜೆ** – ರುದ್ರ ಕ್ರಮಾರ್ಚನೆ, ಚಂಡೀ ನವಾಕ್ಷರೀ ಮಂತ್ರಜಪ
ಶ್ರೀಶಾಂತಾಮ್ಮನವರ ಕುಂಭಾಭಿಷೇಕಾಂಗವಾಗಿ ಪಂಚವಿಂಶತಿ ಕಲಶ ಸ್ಥಾಪನ,
ಅಧಿವಾಸ ಹೋಮ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು.

**ವೈಶಾಖ ಶುಕ್ಲ ಚತುರ್ದಶಿ ಭಾನುವಾರ 11-05-2025**

**ಬೆಳಗ್ಗೆ** – **9.00 ಕ್ಕೆ ಜಗದ್ಗುರು ಶ್ರೀಸನ್ನಿಧಾನಂಗಳವರ ಆಗಮನ, ಮಹಾರುದ್ರಯಾಗದ ಪೂರ್ಣಾಹುತಿ,**
**9.30 ಗಂಟೆಗೆ ಶ್ರೀಋಷ್ಯಶೃಂಗೇಶ್ವರ ಸ್ವಾಮಿಗೆ ವಿಶೇಷವಾದ ಪೂಜೆ. ಮಹಾರುದ್ರ ಕಲಶದ ಅಭಿಷೇಕ, ಮಹಾನೀರಾಜನ.**
**10.30 ಗಂಟೆಯಿಂದ ಶ್ರೀಶಾಂತಾಮ್ಮನವರಿಗೆ ಕುಂಭಾಭಿಷೇಕ, ಅರ್ಚನೆ, ಮಹಾನೀರಾಜನ.**

**ವೈಶಾಖ ಶುಕ್ಲ ಹುಣ್ಣಿಮೆ ಸೋಮವಾರ 12-05-2025**

**ಬೆಳಗ್ಗೆ** – 11.00 ಗಂಟೆಗೆ ಶ್ರೀಜಗದ್ಗುರು ಸನ್ನಿಧಾನಂಗಳವರ ಆಗಮನ, ದೇವತಾ ದರ್ಶನ,
ಸಹಸ್ರಚಂಡೀ ಮಹಾಯಾಗದ ಪೂರ್ಣಾಹುತಿ,
**ಜಗದ್ಗುರು ಮಹಾಸ್ವಾಮಿಗಳವರಿಂದ ಅನುಗ್ರಹ ಭಾಷಣ,**
ಫಲ ಮಂತ್ರಾಕ್ಷತೆ ಅನುಗ್ರಹ. ಪ್ರಸಾದ ವಿನಿಯೋಗ

**ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ**
**ದಕ್ಷಿಣಾಮ್ನಾಯ ಶ್ರೀಶಾರದಾಪೀಠ, ಶೃಂಗೇರಿ**